ಸ್ವಗೃಹವಾಸದ ಅನೇಕ ಸುಖಗಳಿಗೆ ತಿಲಾಂಜಲಿ ಇತ್ತಿದ್ದಾಳೆ ಪಂಕಜಾಕ್ಷಿ. 'ರೀ, ಟವೆಲ್ ತಂದ್ಕೊಡ್ರೀ...' ಎಂದು ಬಚ್ಚಲುಮನೆಯಿಂದ ಕೂಗುತ್ತಿದ್ದ ಮರೆವಿನ ಸುಖ, 'ನಡೀರಿ, ಇವತ್ತು ಮನೇಲಿ ಒಲೆ ಹಚ್ಚಲ್ಲ' ಎಂದು ಗಂಡ, ಮಗನನ್ನು ಹೊರಡಿಸಿಕೊಂಡು ತಾವು ತಾವೇ ಹೊರಗೆ ಹೋಗುತ್ತಿದ್ದ ಸುಖ, ಸಣ್ಣಪುಟ್ಟ ವಿಷಯಕ್ಕೂ ಮುನಿಸಿಕೊಂಡು ಗಂಡನೊಡನೆ ವಾದ ಹೂಡುತ್ತಿದ್ದ ಸುಖ, ಚಿಕ್ಕಪುಟ್ಟ ಸುಖಗಳಲ್ಲೇ ಜೀವನದ ಸವಿ ಅಡಗಿರುವುದಲ್ಲವೇ? ಅವೆಲ್ಲಾ ಕಳೆದುಕೊಂಡಂತೆನಿಸುತ್ತದೆ ಪಂಕಜಾಕ್ಷಿಗೆ.

'ಏನ್ರೀ ಇದು? ಜಿಗಣೆ ಹಾಗೆ ಕಚ್ಕೊಂಬಿಟ್ಟಿದಾರೆ' ಗಂಡನ ಕಿವಿ ಕಚ್ಚುವುದಕ್ಕಾದರೂ ಸಮಯ ಸಾಧಿಸಬೇಕು. ಗಂಡನಿಗೆ ಇವೆಲ್ಲಾ ಹಿತವಾಗಿವೆ ಎಂದೇನಲ್ಲ. ಬೆಳಗಿನ ಐದಕ್ಕೆ ಎದ್ದು ಹೆಂಡತಿಯೊಡನೆ ಸನಿಹದ ಪಾರ್ಕಿಗೆ ವಾಕಿಂಗ್ ಹೋಗುತ್ತಿದ್ದ ಅಭ್ಯಾಸಕ್ಕೆ ಕಲ್ಲು ಬಿದ್ದಿದೆ. 'ನಾನೂ ಬರ್ತೀನಿ' ಅಂದಿದ್ದಾರೆ ಬೀಗರು. ಅಲ್ಲಾದರೂ ಗಂಡನೊಡನೆ ಮನಸೋಇಚ್ಛೆ ಮಾತನಾಡಬಹುದು ಅಂದುಕೊಂಡರೆ ಆ ಸ್ವಾತಂತ್ರ್ಯಕ್ಕೂ ಕಲ್ಲು. ಬೀಗಿತ್ತಿ ಮಗಳೊಡನೆ ಅಡುಗೆಮನೆಯ ಸಾಮ್ರಾಜ್ಯ ವಶಪಡಿಸಿಕೊಂಡರೆ ಬೀಗರು ಗಂಡನ ಸಾಹಚರ್ಯವನ್ನು ಕಸಿದುಕೊಂಡಿದ್ದಾರೆ.

'ಕುಡಿದ ನೀರು ಅಲ್ಲಾಡದಂತೆ ಅಪ್ಪ, ಅಮ್ಮನನ್ನು ನೋಡಿಕೊಳ್ಳುತ್ತಿದ್ದೇನೆ. ದೀಪ ಹಚ್ಚಿಕೊಂಡು ಹುಡುಕಿದರೂ ಇಂತಾ ಸಂಬಂಧ ಸಿಕ್ಕುತ್ತಿರಲಿಲ್ಲ' ಎಂದು ಪ್ರಸಾದನ ಹೆಮ್ಮೆ. ಆರ್ಥಿಕವಾಗಿ ಅವರು ಹೊರೆಯಾಗುವುದಿರಲಿ, ಇವರ ಭಾರವನ್ನೇ ಇಳಿಸಿದ್ದಾರೆ ಅಂದರೆ ತಪ್ಪಲ್ಲ. ಅಪ್ಪ ನಿವೃತ್ತಿಯಾದ ಮೇಲೆ ಪ್ರಸಾದ ಹೇಳಿದ್ದ, 'ಇನ್ನು ಮಾವ, ನೀನು ಇಬ್ರೂ ಕೂತ್ಗೊಂಡು ಇಸ್ಪೀಟ್ ಆಡಿ. ಬೇಕಿದ್ರೆ ಯಾವುದಾದ್ರೂ ಕ್ಲಬ್ಬಿಗೆ ಸೇರ್ಕೊಳ್ಳಿ. ಮಜಾ ಮಾಡಿ...'

***

ತಿಂಗಳಿಗೆ ಇಪ್ಪತ್ತು ದಿನಗಳು ಎನ್ನುವಂತೆ ಮಗಳ ಮನೆಯಲ್ಲಿ ಟೆಂಟು ಹಾಕುತ್ತಿದ್ದ ಬೀಗರಿಗೆ ಅಲ್ಲೇ ಕೆಲ ತಿಂಗಳು ಖಾಯಮ್ಮಾಗಿರಬೇಕಾದ ಸನ್ನಿವೇಶ ಸೃಷ್ಟಿಯಾಯ್ತು. ಸೊಸೆ ಕಲ್ಪನಾಳ ತಂದೆ ಬಚ್ಚಲಲ್ಲಿ ಜಾರಿ ಬಿದ್ದು ಕೈ ಮುರಿದುಕೊಂಡಿದ್ದು ಒಂದು ಎಳೆ. ಅವರ ಬಳಗ ಎಷ್ಟು ದೊಡ್ಡದಿದೆ ಎಂದು ಪಂಕಜಾಕ್ಷಿ ಬೆಟ್ಟು ಕಚ್ಚಿಕೊಳ್ಳುವಂತಾಯ್ತು. ನೆಂಟರಿಷ್ಟರು, ಸ್ನೇಹಿತರು ಎಂದು ಯಾರ್‍ಯಾರೋ ಬರುತ್ತಿದ್ದರು. ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದರು. ಹೀಗೆ ತಮ್ಮವರೆನಿಸಿಕೊಂಡವರು ಮನೆಗೆ ಬಂದು ಬಾಯ್ತುಂಬಾ ಮಾತಾಡಿಸಿಕೊಂಡು ಹೋದರೆ ಬೀಗರಿಗೆ ಪರಮ ಸಂತೃಪ್ತಿ. 'ನೋಡಿ, ನಮ್ಮ ಹಿತೈಷಿಗಳು ಎಷ್ಟು ಜನ ಇದಾರೆ' ಎಂದು ತೋರಿಸಿಕೊಂಡಂತಾ ಹೆಮ್ಮೆ. ಊಟದ ಹೊತ್ತಿಗೆ ಬಂದವರಿಗೆ ಊಟ. ಬೇರೆ ಹೊತ್ತಲ್ಲಿ ಬಂದವರಿಗೆ ಏನಾದರೊಂದು ತಿಂಡಿ. ಯಾರೋ ಗುರುತು ಪರಿಚಯ ಇಲ್ಲದವರ ಜೊತೆ ಕೂತು ಲೋಕಾಭಿರಾಮ ನಡೆಸುವುದೆಂದರೆ ಪಂಕಜಾಕ್ಷಿಗೆ ಜೀವ ಬಾಯಿಗೆ ಬಂದಂತಾಗುತ್ತಿತ್ತು. ರೂಮಿಗೆ ಹೋಗಿ ತಮ್ಮಷ್ಟಕ್ಕೆ ಕೂರುವಂತೆಯೂ ಇಲ್ಲ. ಮಧ್ಯಾಹ್ನದ ಊಟದ ನಂತರ ಕೈಗೆ ನೀರು ಬೀಳುತ್ತಿದ್ದಂತೆ ಕೋಣೆ ಸೇರಿಕೊಂಡು ಸವಿನಿದ್ದೆಗೆ ಜಾರುವಂತೆಯೂ ಇಲ್ಲ. ಮಗ ಎಲ್ಲರೊಡನೆ ಬೆರೆತು ಹೇಗೆ ಸಲೀಸಾಗಿ ವ್ಯವಹರಿಸುತ್ತಾನೆ, ಸಂತೋಷವಾಗಿರುತ್ತಾನೆ ಎಂದು ಅವರಿಗೆ ಆಶ್ಚರ್ಯ. ತಮ್ಮ ಸ್ವಭಾವವೇ ಅಂತಾದ್ದಾ ಎಂದು ಗಂಡಹೆಂಡಿರು ಮಾತಾಡಿಕೊಳ್ಳುವುದಿದೆ. ಅದು ನಿಜವೆನ್ನುವುದನ್ನು ಒಪ್ಪಿಕೊಳ್ಳುವುದಿದೆ. ಇಂತಾ ಉಪಚಾರ ಬೀಗರ ಪೈಕಿಯವರಿಗೆ ಮಾತ್ರ ಅಲ್ಲ, ಪ್ರಸಾದ, ಪಂಕಜಾಕ್ಷಿಯ ಕಡೆಯವರು ಬಂದರೂ ಯಥಾಸಾಂಗವಾಗಿ ನಡೆಯುತ್ತಿತ್ತು. ಬಂದವರ ಉಪಚಾರದಲ್ಲಿ ಯಾವ ಅರೆಯೂ ಆಗುತ್ತಿರಲಿಲ್ಲ. ಆದರೂ ಒಮ್ಮೆ ಫೋನಿನಲ್ಲಿ ಗುಟ್ಟಾಗಿ ಹೇಳಿದ್ದಳು ಪಂಕಜಾಕ್ಷಿಯ ತಂಗಿ, 'ನಿಮ್ಮನೆ ಅಂದ್ರೆ ಅಕ್ಕನ ಮನೆ ಅಂತ ಈಗ ಅನ್ನಿಸ್ತಾನೇ ಇಲ್ಲ ಕಣೇ. ಯಾರೋ ಬೇರೆಯವರ ಮನೆಗೆ ಬಂದ ಹಾಗಾಗುತ್ತೆ...'

ಅವಳು ಹೇಳಿದ್ದರಲ್ಲಿ ತಪ್ಪೇನಿರಲಿಲ್ಲ. ತಂಗಿ ಮನೆಗೆ ಬಂದರೆ ಪಂಕಜಾಕ್ಷಿಗೆ ವಿಪರೀತದ ಹಿಗ್ಗು. ಅಡುಗೆಮನೆಯ ಕಟ್ಟೆಯ ಮೇಲೇ ಸ್ಥಾಪನೆಯಾಗುತ್ತಿದ್ದಳು ತಂಗಿ. ಊರ ಪುರಾಣವನ್ನೆಲ್ಲಾ ಗಳಪುತ್ತಿದ್ದಳು. ರೊಟ್ಟಿಯೋ, ದೋಸೆಯೋ ಮಾಡಿಕೊಟ್ಟರೆ 'ಉರಿ ಸಣ್ಣ ಮಾಡ್ಕೊಂಡು ಇನ್ನೊಂದಿಷ್ಟು ಗರಿಗರಿಯಾಗಿ ಬೇಯಿಸು...' ಎಂದೆಲ್ಲಾ ಹದ ಹೇಳಿ ತನಗೆ ಬೇಕಾದಂತೆ ಮಾಡಿಸಿಕೊಳ್ಳುತ್ತಿದ್ದಳು. ಅವಳ ಸಂಸಾರ ಬಂದಾಗ ಎಲ್ಲಾ ಒಟ್ಟಾಗಿ ಹೊರಗಡೆ ಹೋಗುವುದಿತ್ತು. ಈಗ ಅವೆಲ್ಲಾ ಸಾಧ್ಯವಾಗುತ್ತಿಲ್ಲ. ತಾವುತಾವೇ ಹೋದರೆ ಏನೆನಿಸಬಹುದು ಮಗನಿಗೆ? 'ತಮ್ಮದೇ ಪಾರ್ಟಿ ಕಟ್ಟಿಕೊಳ್ಳುತ್ತಿದ್ದಾರೆ' ಅನಿಸಿದರೆ ಚಂದವೇ? ಇತ್ತೀಚೆಗೆ ತಂಗಿ ಬರುವುದೂ ಕಮ್ಮಿಯಾಗಿದೆ. ಅನಿಸಿದ್ದನ್ನು ಮುಚ್ಚಿಟ್ಟು ಕೊಳ್ಳದೆ ಹೇಳುವವಳು ಅವಳೊಬ್ಬಳೇ. ಅವಳಲ್ಲಿ ಕೂಡ ತಮ್ಮ ಪರಿಸ್ಥಿತಿ ಹೇಳಿಕೊಳ್ಳಲು ಹಿಂದೆಗೆಯುವಂತಾಗುತ್ತಿತ್ತು. ಹೇಗೋ, ಎಂತೋ ಮಗನ ಕಿವಿ ತಲುಪಿದರೆ? ಕಡೆಗಾಲದಲ್ಲಿ ನೋಡಿಕೊಳ್ಳಲು ಇರುವವನು ಅವನೊಬ್ಬನೇ. ಅವನ ಮನಸ್ಸು ಒಡೆಯಬಾರದಲ್ಲವೇ? ತನ್ನ ಅಪ್ಪ, ಅಮ್ಮ ತಮ್ಮ ಕಣ್ಮುಂದೆ ಇರಲಿ ಎಂದು ಸೊಸೆ ಅಂದುಕೊಂಡರೆ ಅದೂ ತಪ್ಪಲ್ಲ. ಅವರಿಗೂ ಇಳಿವಯಸ್ಸು. ತಂಗಿಗೆ ಗದರಿದ್ದಳು ಪಂಕಜಾಕ್ಷಿ, 'ನಿಮ್ಮಕ್ಕನ ಮನೆ ನಿಮ್ಮಕ್ಕನ ಮನೇನೇ. ಏನೇನೋ ಕಲ್ಪನೆ ಮಾಡ್ಕೊಂಡು ನನ್ನ ತಲೆಕೆಡಿಸ್ಬೇಡ. ಮೊದಲಿನ ಹಾಗೆ ಬಂದು, ಹೋಗಿ ಮಾಡ್ತಿರು...'

'ಆಯ್ತೇ ಮಾರಾಯ್ತೀ, ನೀನು ಹೊಂದಿ ಕೊಂಡಿದ್ರೆ ಸಾಕಪ್ಪಾ...' ಗಾಯಕ್ಕೆ ಮುಲಾಮು ಸವರುವ ಮಾತಾಡಿದ್ದಳು ತಂಗಿ.

ಬಾಯಲ್ಲಿ ಏನು ಹೇಳಿದರೂ ಪಂಕಜಾಕ್ಷಿಗೆ ನೆಮ್ಮದಿಯಿಲ್ಲ. ತಮ್ಮ ಮನೆಯಲ್ಲೇ ಪರಕೀಯರಾಗಿ ಬದುಕುತ್ತಿರುವೆವೆಂಬ ಭಾವನೆ ಕಡಿಮೆಯಾಗುತ್ತಿಲ್ಲ. ಇವರು ಕೈಯಾರೆ ದುಡ್ಡು ಕೊಡುವುದೇನು ಬೇಕಾಗಿರಲಿಲ್ಲವಾದರೂ ಎರಡು ತಿಂಗಳು ಬಾಳಿಕೆ ಬರುತ್ತಿದ್ದ ಗ್ಯಾಸ್ ಸಿಲಿಂಡರ್ ತಿಂಗಳಿಗೂ ಸಾಕಾಗುವುದಿಲ್ಲ ಅನ್ನುವಂತಾ ಸಣ್ಣ ಸಂಗತಿ ಕೂಡಾ ಮಾನಸಿಕ ಸ್ವಾಸ್ಥ್ಯವನ್ನು ಗೀರುತ್ತಿತ್ತು. ತಿಂಗಳಿಗೆ ಇಷ್ಟು ಲೀಟರು ಎಣ್ಣೆ, ಇಷ್ಟು ಕೆ.ಜಿ. ತುಪ್ಪ, ಇಷ್ಟು ಲೀಟರು ಹಾಲು, ಇಷ್ಟು ಬೇಳೆ ಎಂದು ಲೆಕ್ಕ ಹಾಕುವಂತಾಗುತ್ತಿತ್ತು. ಗಂಡನ ಕಿವಿಯಲ್ಲಿ ಉಸುರುವಂತಾಗುತ್ತಿತ್ತು. ಇದರ ಹಿನ್ನೆಲೆಯಲ್ಲಿ ಹೆಚ್ಚಾಗಿ ಹೊರಗಿನಿಂದ ಸಾಮಾನು ತಂದುಕೊಡುವವನು ತಮ್ಮ ಮಗ ಎನ್ನುವ ಸತ್ಯ ಮನಸ್ಸನ್ನು ಗೀರುತ್ತಿತ್ತು.

***

ಮುರಿದ ಕೈ ರಿಪೇರಿಯಾದರೂ ಬೀಗರು ತಳ ಕೀಳುವ ಲಕ್ಷಣ ಕಾಣಿಸಲಿಲ್ಲ. ಸ್ವಂತ ಮನೆಯಂತೆ ಮಗಳ ಮನೆಗೆ ಅವರು ಹೊಂದಿಕೊಂಡುಬಿಟ್ಟಿದ್ದರು. 'ಏನ್ರೇ, ಒಂದು ಕಪ್ ಸ್ಟ್ರಾಂಗ್ ಕಾಫಿ...' ಎಂದು ಬೀಗರು ಕೇಳುವಷ್ಟು ಸಲೀಸಾಗಿ ತನ್ನ ಗಂಡನಿಗೆ ಬಾಯ್ಬಿಡಲಾಗುವುದಿಲ್ಲ ಎನ್ನುವ ಸತ್ಯ ಪಂಕಜಾಕ್ಷಿಗೆ ಅರಿವಾಗಿದೆ. ಮನೆ ಅಂದರೆ ಏನು? ಸುಖವಾಗಿ, ಸ್ವತಂತ್ರವಾಗಿ, ಸ್ವಚ್ಛಂದವಾಗಿ ಇರುವಂತಾ ವಾತಾವರಣವಿದ್ದರೆ ಅದು ಮನೆ. 'ಹಾಗಿರಬಾರದು' ಎಂದು ಅಡ್ಡಿಪಡಿಸುವವರು ಯಾರೂ ಇಲ್ಲ. ಆದರೂ ಹಾಗಿದ್ದೇನೆ ಅಂದರೆ ಅದು ತನ್ನ ವಿಪರೀತ ಸ್ವಭಾವ ಎಂದು ಪಂಕಜಾಕ್ಷಿಗೆ ಅನಿಸುತ್ತಿದ್ದರೂ ಒಳಗಿನ ತಳಮಳ ಕಮ್ಮಿಯಾಗುತ್ತಿಲ್ಲ. ಮಗ ನೇರವಾಗಿ ಅತ್ತೆ, ಮಾವನಿಗೆ ತಾಕೀತು ಮಾಡಿದ್ದ, 'ಇನ್ಮೇಲೆ ಇಲ್ಲೇ ಇದ್ಬಿಡಿ. ಏನಾದ್ರೂ ಹೆಚ್ಚುಕಮ್ಮಿ ಆಯ್ತೂಂದ್ರೆ ನೋಡ್ಕಳ್ಳೋಕೆ ನಾವಿರ್ತೀವಿ. ಇಬ್ರೇ ಯಾಕೆ ಒದ್ದಾಡ್ತಿರ್ಬೇಕು?'

ಇಂತಾ ಮಾತಾಡುವಾಗ ಅಪ್ಪ, ಅಮ್ಮನನ್ನು ಒಂದು ಮಾತು ಕೇಳಬೇಕು ಎಂದು ಪ್ರಸಾದನಿಗೆ ಅನಿಸಲಿಲ್ಲ. ಅನಿಸಲು ಕಾರಣವೂ ಇರಲಿಲ್ಲ. ಅಪ್ಪ, ಅಮ್ಮನ ಕಾರ್ಯಭಾರ ಎಷ್ಟೋ ಕಡಿಮೆಯಾಗಿ ಅವರು ಹಾಯಾಗಿದ್ದಾರೆ ಎಂದು ಅವನ ಗಟ್ಟಿ ನಂಬುಗೆ.

***

'ನಾವೇ ಬೇರೆ ಮನೆ ಮಾಡ್ಕೊಂಡು ಹೋಗೋಣ್ವೇನ್ರೀ? ಮದುವೆ ಆಗ್ತಿದ್ದ ಹಾಗೆ ಗಂಡು ಮಕ್ಕಳು ಬೇರೆ ಮನೆ ಮಾಡಿದ್ರೆ ಹೆತ್ತವರನ್ನು ಕಡೆಗಣಿಸ್ತಿದಾರೆ ಅನ್ನಿಸ್ತಿತ್ತು. ಅದೇ ಪರಮಸುಖ ಅಂತ ಈಗ ಅನ್ನಿಸ್ತಿದೆ. ಎಲ್ರಿಗೂ ಅವರವರ ಬದುಕು ಅನ್ನೋದು ಇದ್ದೇ ಇರುತ್ತಲ್ವಾ? ಅವರಷ್ಟಕ್ಕೆ ಅವರು ಪ್ರತ್ಯೇಕವಾಗಿದ್ರೆ ಎಲ್ರಿಗೂ ನೆಮ್ಮದಿ. ಅವರಿಗೆ ಬೇಕಾದ ಹಾಗೆ ಅವರಿರಬಹುದು, ನಮಗೆ ಬೇಕಾದ ಹಾಗೆ ನಾವು. ಕಷ್ಟ, ಸುಖ ಅಂದ್ರೆ ಬಂದು ಹೋಗಿ ಮಾಡ್ತಿದ್ರೆ ಬೇಕಾದಷ್ಟಾಯ್ತು...'

'ಶ್, ನಿಧಾನ, ನಿಧಾನಕ್ಕೆ ಮಾತಾಡು...' ಅಂದರು ಗಂಡ. ಆ ದನಿಯಲ್ಲೇ ಗಂಡನ ಅಸಹಾಯಕತೆ ಅರ್ಥವಾಯ್ತು ಪಂಕಜಾಕ್ಷಿಗೆ. ವಿರಸದ ಒಂದು ಸಣ್ಣ ಕಿಡಿಗೂ ಅವಕಾಶವಿಲ್ಲದಿದ್ದಲ್ಲಿ ತಾವೇ ಕಡ್ಡಿ ಗೀರಿ ಬೆಂಕಿ ಹಚ್ಚಲು ಹೋದರೆ ಏನೆಂದುಕೊಂಡಾನು ಮಗ? ಪಂಕಜಾಕ್ಷಿ ದೀರ್ಘ ನಿಟ್ಟುಸಿರ್ಗರೆದಳು.

**ಪ್ರತಿಕ್ರಿಯಿಸಿ: feedback@sudha.co.in**